# ಸ್ನೇಹ ಸಂದೇಶ...

ರಾತ್ರಿ ಎಷ್ಟೊತ್ತೊ ಏನೊ, ಕುಟು ಕುಟು ಅಂತ ಸದ್ದು ಕೇಳ್ತಾ ಇತ್ತು, ಮುಂಜಾನೆಯಿಂದ ಸಂಜೆವರೆಗೆ ಕೀಬೋರ್ಡ ಕುಟ್ಟಿ ಕುಟ್ಟಿ ಅದೇ ಸದ್ದು ಕಿವಿಯಲ್ಲಿ ಗುಂಯ್‌ಗುಡುತ್ತಿದೆಯೇನೊ ಅಂತ ಕಿವಿಯಲ್ಲಿ ಕಿರುಬೆರಳು ತೂರಿಸಿ ಕಟ್ಟಾಡಿಸಿಕೊಂಡೆ, ಕಿವಿಯಿನ್ನೂ ಚುರುಕಾಗಿ ಸದ್ದು ಜಾಸ್ತಿಯಾಯ್ತು. ಕಣ್ಣು ತೀಡುತ್ತ ಎದ್ದು ಸಮಯನಾದ್ರೂ ಎಷ್ಟು ನೋಡೊಣ ಅಂದ್ರೆ, ವಾಣಿನೂ (ಮೊಬೈಲೂ) ಕೈಗೆ ಸಿಗಲಿಲ್ಲ, ಅಲ್ಲೆ ಪಕ್ಕದಲ್ಲೇ ಬಿದ್ಕೊಂಡು ಕಣ್ಣುಹೊಡೀತಾ ಇರ್ತಿದ್ದು (ಪಿಳಿ ಪಿಳಿ ಅನ್ನುವ ಮೊಬೈಲಿನ ಎಲ್.ಈ.ಡಿ ಲೈಟು ಇರುತ್ತಲ್ಲ). ಎಲ್ಲಿ ಕಾಣೆಯಾದ್ಲು ಅಂತ ಹುಡುಕಿದೆ, ಸಿಗಲಿಲ್ಲ, ಈ ಪಕ್ಕ ನನ್ನಾಕೆ ಮುಖ ಕಾಣದಂತೆ ಸೆರಗು ಹೊದ್ದಿರುವ ನವವಧುವಿನಂತೆ, ಮುಸುಕು ಹಾಕಿಕೊಂಡು ಮಲಗಿದ್ಲು, ಅವಳನಾದ್ರೂ ಎಬ್ಬಿಸಿ ಕೇಳೊಣ ಅಂತ ಅಲುಗಿಸಿದರೆ, "ಹೂಂ..." ಅಂದ್ಲು, ಅರೆ! ಇನ್ನೂ ಎಚ್ಚರವಾಗೇ ಇರೊ ಹಾಗೆ ಇದೆ ಅಂತ ಮುಸುಕೆಳೆದರೆ, "ರಾತ್ರಿ ಹನ್ನೆರಡಕ್ಕೆ ಏನ್ರೀ ನಿಮ್ದು" ಅಂತೆದ್ದಳು, ನನ್ನೆಲ್ಲ ಪ್ರಶ್ನೆಗಳಿಗೆ ಉತ್ತರ ಸಿಕ್ತು, ನನ್ನಾಕೆ ಜತೆ, ವಾಣಿ ಕೂಡ ಅಲ್ಲೇ ಇದ್ಲು, ಸದ್ದು ಕೂಡ ಅಲ್ಲಿಂದಲೇ ಬರುತ್ತಿತ್ತು, ಸಮಯ ಹನ್ನೆರಡಾಗಿತ್ತು.

"ಅದನ್ನೇ ಈಗ ನಾನು ಕೇಳಬೇಕು, ರಾತ್ರಿ ಹನ್ನೆರಡಕ್ಕೆ ಏನೇ ನಿಂದು, ಮೊಬೈಲನಲ್ಲಿ ಏನು ನೋಡ್ತಾ ಇದೀಯಾ, ಯಾರಾದ್ರೂ ಹುಡುಗಿಯರ ಎಸಎಂಎಸ್ ಸಿಗುತ್ತಾ ಅಂತ ಹುಡುಕ್ತಾ ಇದೀಯ, ಯಾರೂ ಇಲ್ಲ ಅನ್ನೊದಷ್ಟೇ ಅಲ್ಲ, ಕಳಿಸಿದ್ರೂ ಡಿಲೀಟಂತೂ ಮಾಡಿರ್ತೀನಿ, ನಿನಗೇನೂ ಸಿಗಲ್ಲ ಅಲ್ಲಿ" ಅಂತಂದೆ. "ಅದನ್ನ ಕಟ್ಕೊಂಡು ನನಗೇನು ಆಗ್ಬೇಕು, ಯಾವೊದೋ ಕಸ್ಟಮರ ಕೇರ್ ಹುಡುಗಿ ಕಾಲ್ ಬಂದಿದ್ರೂ ಕುಣಿದಾಡಿಬಿಡ್ತೀರ ಇನ್ನು ಹುಡುಗಿಯಿಂದ ಸ್ಪೇಷಲ್ ಎಸಎಂಎಸ್ ಎಲ್ಲಾ ಬಂದ್ರೆ ನಂಗೆ ಗೊತ್ತಾಗದೇ ಇರ್ತಾದಾ, ಮುಖದಲ್ಲೇ ಗೊತ್ತಾಗಿಬಿಡ್ತದೆ ನಂಗೆ.... ಮತ್ತೇನಿಲ್ಲ ನಾನು ಸ್ವಲ್ಪ ಎಸಎಂಎಸ್ ಕಳಿಸ್ತಾ ಇದ್ದೆ, ಸುಮ್ನೆ ಮಲ್ಕೊಳ್ಳಿ, ನಿಮಗೆ ಎಚ್ಚರಾಗಬಾರದು ಅಂತಾನೇ ಮುಸುಕು ಹಾಕಿಕೊಂಡಿದ್ದೆ" ಅಂದ್ಲು, ಅಲ್ಲಾ ನನ್ನ ಏನ್ ಚೆನ್ನಾಗಿ ಅರ್ಥ ಮಾಡಿಕೊಂಡಿದಾಳೆ ಇವ್ಳು ಅಂತೀನಿ, ಇನ್ನು ಮೇಲೆ ಯಾವ ಫೋನು ಬಂದ್ರೂ ಏನೂ ಮುಖದಲ್ಲಿ ತೋರಿಸಿಕೊಳ್ಳಬಾರದು ಅನ್ಕೊಂಡು, "ಅದ್ಯಾರಿಗೆ ಅದೂ ಇಷ್ಟೊತ್ತನಲ್ಲಿ" ಅಂತ ರಾಗ ಎಳೆದೆ. ದುರುಗುಟ್ಟಿ ನೋಡಿದ್ಲು, ಏನೋ ಕೇಳಬಾರದ್ದು ಕೇಳಿದಂತೆ. ಹೇಳದಿದ್ರೆ ಬಿಡು ಅಂತ, ಅವಳೆಡೆಗೆ ಬೆನ್ನು ಮಾಡಿ ಮಲಗಿದೆ. ನಿಧಾನವಾಗಿ, ಪಕ್ಕಕ್ಕೆ ಒರಗಿದ್ದ ಕೈತೋಳಿನ ಮೇಲೆ ಕತ್ತು ಇಟ್ಟು ಕೇಳಿದ್ಲು "ಏನ್ ಸಿಟ್ಟು ಬಂತಾ" ಅಂತ "ಇಲ್ಲಾ ಆನಂದ ಉಕ್ಕಿ ಬರ್ತಿದೆ" ಅಂದೆ, "ಅಯ್ಯೊ ಆನಂದನನ್ನೇ ಮರ್ತಿದ್ದೆ" ಅಂತನ್ನುತ್ತ ಇನ್ನೊಂದೇನೊ ಕುಟ್ಟಿ, ಕಳಿಸಿ ಮತ್ತೆ ಮರಳಿ, "ರೀ, ಯಾಕೆ ಬೇಜಾರು, ಫ್ರೆಂಡಶಿಪ್ ಡೇ ಅಲ್ವಾ ಮೆಸೇಜು ಕಳಿಸ್ತಾ ಇದ್ದೆ" ಅಂದ್ಲು. "ರಾತ್ರಿ ಹನ್ನೆರಡಕ್ಕೆ" ಅಂದೆ "ಮತ್ತೆ ನಾನೇ ಫಸ್ಟ್ ಎಲ್ರಿಗೂ ವಿಷ್ ಮಾಡಿದ್ದು ಗೊತ್ತಾ" ಅಂತ ಹೆಮ್ಮೆಯಿಂದ ನುಡಿದಳು. "ನಿಮ್ಮಿಂದಾಗೇ ಈ ಹೊಸಾ ವರ್ಷದ ರಾತ್ರಿ ಎಲ್ಲ ಫೋನು ನೆಟವರ್ಕ ಜಾಮ್ ಆಗೋದು" ಅಂದೆ. "ನೆಟವರ್ಕ ಜಾಮ್ ಆಗತ್ತೆ ಅಂತ ಮೆಸೆಜೇ ಕಳಿಸಬಾರದಾ" ಅಂದ್ಲು. "ಎಷ್ಟು ಕಳಿಸಿದೆ" ಅಂದೆ "ಜಾಸ್ತಿ ಏನಿಲ್ಲ ಒಂದಿಪ್ಪತ್ತು ಇರಬೇಕು" ಅಂತ ಮೊಬೈಲು ಆಕಡೆ ಇಟ್ಟಳು, "ನಿನ್ನ ಮೊಬೈಲ್ನಲ್ಲೇ ಕಳಿಸೊದು ತಾನೆ" ಅಂದೆ. "ರೀ ನಿಮ್ಮ ಮೊಬೈಲ್ನಲ್ಲಿ ಮೆಸೇಜು ಫ್ರೀ ಅದಕ್ಕೆ ಕಳಿಸಿದೆ" ಅಂದ್ಲು. "ಮೆಸೇಜು ಫ್ರೀ ಇಲ್ದೇ ಇದ್ರೆ?" ಅಂತ ಕೆದಕಿದೆ, "ನಾನೇನು ನಿಮ್ಮ ದುಡ್ಡು ಹಾಳು ಮಾಡಲ್ಲ ಬಿಡಿ, ಹಾಗಿದ್ರೆ ನಾಲ್ಕು ಕ್ಲೋಜ್ ಫ್ರೆಂಡ್ಸಗೆ ಮಾತ್ರ ಕಳಿಸ್ತಾ ಇದ್ದೆ" ಅಂತ ರೇಜಿಗೆದ್ದಳು. "ಪ್ರಶ್ನೇ ದುಡ್ಡಿನದಲ್ಲ, ಈಗ ನೀನು ಕಳಿಸಿದ ಮೆಸ್ಸೆಜಿನಲ್ಲಿ ನಾಲ್ಕು ಜನ ಮಾತ್ರ ಕ್ಲೋಜ್ ಫ್ರೆಂಡ್ಸ್, ಉಳಿದವರು ಹಾಗೆ ಸುಮ್ನೇ" ಅಂದೆ. "ಹಾಗೇನಿಲ್ಲ ಅವರೂ ಫ್ರೆಂಡ್ಸ, ಆದ್ರೆ ಅಷ್ಟು ಕ್ಲೋಜ ಅಲ್ಲ" ಅಂತಂದಳು "ಹೋಗ್ಲಿ ಆ ನಾಲ್ಕು ಜನರಲ್ಲಿ ಎಷ್ಟು ಜನರೊಂದಿಗೆ ಆಗಾಗ ಮಾತಾಡ್ತಾ ಇರ್ತೀಯಾ" ಅಂತ ಮತ್ತೆ ತನಿಖೆಗಿಳಿದೆ "ರೀ, ಏನ್ ಪೋಲಿಸ ವಿಚಾರಣೆ ಮಾಡಿದ ಹಾಗೆ ಮಾಡ್ತಾ ಇದೀರ" ಅಂತ ತಿರುಗಿ ಬಿದ್ದಳು, "ಈಗ ಹೇಳ್ತೀಯ ಇಲ್ವಾ" ಅಂದೆ, "ಇಬ್ರು" ಅಂತ ಹುಬ್ಬು ಗಂಟಿಕ್ಕಿದಳು. "ಹಾಗಾದ್ರೆ ಇಷ್ಟೊತ್ತು **ಮೆಸೇಜ ಕಳಿಸಿದ್ದರಲ್ಲಿ, ಎರಡು ಮಾತ್ರ ಇಷ್ಟದಿಂದ ಕಳಿಸಿದ್ದು, ಉಳಿದದ್ದು ಏನೋ ಕಳಿಸಬೇಕಲ್ಲ ಅಂತ ಕಳಿಸಿದ್ದು**" ಅಂದೆ. ಅವಳು ಮರು ಮಾತಾಡಲಿಲ್ಲ, ಏನೊ ಮನಸಿನಲ್ಲಿ ತಾಕಲಾಟ ನಡೆದಿತ್ತು.

ಬಹಳ ಹೊತ್ತು ಹಾಗೆ ಕೂತಿದ್ದಳು, ಇರಲಿ ಮಲಗು ನಾಳೆ ನೋಡೋಣ ಅಂತ ಉರುಳಿದರೆ, ಬೆನ್ನ ಮೇಲೊಂದು ಗುದ್ದಿ "ರೀ ಏಳ್ರೀ ಮೇಲೆ, ಇಷ್ಟೊತ್ತು ಏನೇನೊ ಹೇಳಿ, ತಲೆ ಕೆಡಿಸಿ ನಿದ್ದೆ ಹಾಳು ಮಾಡಿ, ನೀವ ಹಾಯಾಗಿ ನಿದ್ದೆ ಮಾಡಬೇಕು ಅಂತೀದೀರ" ಅಂದ್ಲು. ಅವಳ ಏಟಿಗೆ, ಇರೊ ಬರೊ ನಿದ್ರೆ ಎಲ್ಲ ಹಾರಿ ಹೋಗಿ ಕಣ್ಣು ನಿಚ್ಚಳಾದವು. "ನೀವು ಯಾರಿಗೂ ವಿಷ್ ಮಾಡಲ್ವೇ" ಅಂತ ಅಪರಾಧಿ ಜಡ್ಜನನ್ನು ತರಾಟೆಗೆ ತೆಗೆದುಕೊಂಡಂತೆ ಕೇಳಿದ್ಲು. "ಮಾಡ್ತೀನಲ್ಲ, ಹ್ಯಾಪಿ... ಫ್ರೆಂಡಶಿಪ್ ಡೇ...." ಅಂತ ಮಧ್ಯರಾತ್ರಿ ನರಿ ನಾಯಿ ಊಳಿಟ್ಟಂಗೆ ಉಸುರಿದೆ. "ರೀ ನೀವೇನ ಆಕಾಶವಾಣಿ ಧಾರವಾಡಾನಾ ಇಲ್ಲಿ ಕೂತು ಹೇಳಿದ್ರೆ ಊರೆಲ್ಲ ಕೇಳೋಕೆ, ದೊಡ್ಡ ಕಂಜ್ಯೂಸ ಕಣ್ರೀ ನೀವು, ಮೆಸೇಜ ಮಾಡೋಕೆ ಆಗಲ್ವಾ." ಅಂತ ಬಯ್ದಳು. "ಮೆಸೇಜೇನು ಕರೆ ಮಾಡಿ ಮಾತಾಡ್ತೀನಿ, ಆದ್ರೆ ಸುಮ್ನೇ ಹತ್ತು ಜನರಿಗೆ ಎಸಎಂಎಸ್ ಕಳಿಸಲ್ಲ, ನಾನೀಗ ವಿಷ್ ಮಾಡಿದ್ದು ನಿನಗೆ" ಅಂದೆ. "ಏನ್ರೀ ನಾನು ಫ್ರೆಂಡಾ, ನಾನು ನಿಮ್ಮ ಹೆಂಡತಿ, ಯಾಕೇ ತಾಳಿ ಕಟ್ಟಿದ್ದು ಮರೆತುಹೋಯ್ತಾ" ಅಂತಂದಳು. "ತಾಳಿ ಕಟ್ಟಿದಾಕ್ಷಣ, ಹೆಂಡ್ತಿ ಅಂದ್ರೆ ಫ್ರೆಂಡ ಆಗಿರಬಾರದಾ, ಪ್ರಾಣಸಖಿ ಅಂತ

ಹೆಂಡ್ತಿ ಯಾಕೆ ಆಗಬಾರದು, ಫ್ರೆಂಡ ಇಸ್ ಸೆಕೆಂಡ ವೈಫ್ ಅಂತಾರೆ, ಅಂದ್ರೆ ಸ್ನೇಹಿತ ಎರಡನೇ ಹೆಂಡ್ತಿ ಇದ್ದಂತೆ" ಅಂದ್ರೆ "ನಂಗೂ ಇಂಗ್ಲೀಷ ಬರತ್ತೆ ಕನ್ನಡಾನುವಾದ ಎನ್ ಬೇಕಿಲ್ಲ ಗೊತ್ತು ಗೊತ್ತು" ಅಂತ ಮುನಿಸಿಕೊಂಡ್ಲು. "ಗೊತ್ತಿದ್ದ ಮೇಲೆ ಹೆಂಡತಿಯೇ ಸ್ನೇಹಿತೆ ಯಾಕೆ ಆಗಬಾರದು"... ನಿಶಬ್ದ ಸ್ವಲ್ಪ ಹೊತ್ತು...

"ಆಗಬಹುದು" ಅಂತನ್ನುತ್ತ ಹಾಗೇ ಕಾಲ ಮೇಲೆ ತಲೆಯಿರಿಸಿದಳು, ಆ ತಲೆ ನೇವರಿಸುತ್ತ "ಆಗಬಹುದು, ಅಲ್ಲ ನೀನು ಆಗಿದ್ದೀಯಾ, ಒಬ್ಬ ಸ್ನೇಹಿತ ಅಥವಾ ಸ್ನೇಹಿತೆಯ ಹತ್ತಿರ ಎನೂ ಮುಚ್ಚು ಮರೆಯಿಲ್ಲದೇ ಹಾಗೆ ಹೇಳಿಕೊಳ್ಳೊದು ಅಂತಿದ್ದರೆ ಅದು ನಿನ್ನೊಂದಿಗೆ ಮಾತ್ರ, ಬರೀ ನನ್ನ ಜೀವನ ಸಂಗಾತಿ ಅಲ್ಲ, ಜೀವದ ಗೆಳತಿ ಕೂಡ ಆಗೀದೀಯ" ಅಂತಿದ್ದರೆ, "ರೀ ಡೈಲಾಗು ಹೊಡೆದದ್ದು ಸಾಕು" ಅಂತ ತರಲೆಗಿಳಿದಳು "ಇದೇ... ಇದೇ ತುಂಟೀನೇ ನನ್ನ ಫ್ರೆಂಡ್" ಅಂದೆ. "ಅದಿರಲಿ, ಈಗ ನೀವು ಯಾರಿಗೂ ಶುಭಾಷಯ ಹೇಳಲ್ಲ ಹಾಗಿದ್ರೆ?" ಮತ್ತೆ ವಿಷಯಕ್ಕೆ ಮರಳಿದಳು "ಹೇಳಿದೆನಲ್ಲ ನಿಂಗೆ" ಅಂದೆ, ಮುಂದೆ ಹೇಳು ಅನ್ನುವಂತೆ ಓರೆ ನೋಟದಲ್ಲಿ ನೋಡಿದ್ಲು, "ಹೇಳ್ತೀನಿ ಇಲ್ಲ ಅಂತ ಅಲ್ಲ, ಈ ದಿನ ಶುಭಾಷಯ ಹೇಳೊದು ಗೆಳೆಯರೊಂದಿಗೆ ಮಾತಾಡಲು ಒಂದು ನೆಪಮಾತ್ರ ನನಗೆ, ನಾನು ಶುಭಾಷಯ ಹೇಳಲಿ ಬಿಡಲಿ ಅವರು ಗೆಳೆಯರಾಗೆ ಇರ್ತಾರೆ. ಹಾಗೇ ಕೆಲವು ಗೆಳೆಯರಿಗೆ ಖುದ್ದು ನಾನೇ ಏನೊ ಬರೆದು ಮೇಲ್ ಕಳಿಸ್ತೀನಿ, ವೈಯಕ್ತಿಕವಾಗಿ ಫೋನು ಮಾಡಿ ಮಾತಾಡ್ತೀನಿ, ಅದು ನನ್ನ ಶುಭಾಷಯ, **ಯಾರೋ ಕಳಿಸಿದ ಮೆಸೇಜ ಇಪ್ಪತ್ತು ಮಂದಿಗೆ ಕಳಿಸಿ, ಫ್ರೆಂಡಶಿಪ ಡೇ ಆಯ್ತು ಅಂತ ಕೈತೊಳೆದುಕೊಂಡ್ರೆ, ಅಂಥ ಗೆಳೆಯರು ಮತ್ತೆ ಮುಂದಿನ ಫ್ರೆಂಡಶಿಪ ಡೇಗೆ ಮಾತ್ರ ನೆನಪಾಗುತ್ತಾರೆ.**" ಅಂದೆ. ಸುಮ್ಮನೇ ಕೇಳುತ್ತಿದ್ದವಳು. "ನಿಮ್ಮ ಭಾಷಣ ಮುಗೀತಾ" ಅಂತ ಆಕಳಿಸಿದ್ಲು, "ಕೇಳೊವರೆಗೆ ಕೇಳಿ ಈಗ ಭಾಷಣ ಅಂತೀಯ" ಕೆನ್ನೆ ಹಿಡಿದೆಳೆದೆ, "ರೀ, ನಿಮ್ಮ ಕ್ಲೋಜ ಫ್ರೆಂಡ್ಗೆ, ಫ್ರೆಂಡಶಿಪ್ ಡೇ ಗಿಫ್ಟ ಇದನ್ನಾ ಕೊಡೊದು" ಅಂತಂದಿದ್ದಕ್ಕೆ, ಕೆನ್ನೆಗೆ... ... ... "ಸರಿಹೊತ್ತಾಯ್ತು ಮಲಗಬೇಕು ಬಿಡ್ರೀ" ಅಂತ ಚೀರುತ್ತಿದ್ಲು...

ಯೋಚಿಸಿ ನೋಡಿ, ನಿಜವಾಗ್ಲೂ ಈ ಗೆಳೆತನಕ್ಕೆ ಆ ಎಸಎಂಸ್ಸು, ಕಾರ್ಡು, ಮೇಲ್ ಬೇಕಾ, ಅದಿಲ್ಲದಿದ್ದಾಗ ಗೆಳೆತನವೇ ಇರಲಿಲ್ವಾ, ಹೋಗ್ಲಿ ಶುಭಾಷಯ ಹೇಳಲೇ ಬೇಕಿದ್ದರೆ ನನಗೆ ಬಂದ ಮೆಸೇಜು ಹತ್ತಿಪ್ಪತ್ತು ಜನರಿಗೆ ಕಳಿಸಿಬಿಟ್ರೆ ಆಯ್ತಾ, ಇಲ್ಲ ಯಾರೊ ಫಾರವರ್ಡ ಮಾಡಿದ ಈ-ಮೇಲನಲ್ಲೇ ಹೆಸರು ಬದಲಿಸಿ, ಹತ್ತು ಜನರಿಗೆ ಸಿಸಿ(ಕಾರ್ಬನ್ ಕಾಪಿ, ಬಹಳ ಜನರಿಗೆ ಈ-ಮೇಲ ಕಳಿಸುವ ವಿಧಾನ) ಮಾಡಿ ಕಳಿಸಿದ್ರೆ ಶುಭಾಷಯ ಹೇಳಿದ ಹಾಗೆ ಆಯ್ತಾ, ಬಿಸಿಸಿ(ಬ್ಲೈಂಡ ಕಾರ್ಬನ್ ಕಾಪಿ, ಬಹಳ ಜನರಿಗೆ ಒಬ್ಬರಿಗೆ ಕಳಿಸಿದ್ದು ಇನ್ನೊಬ್ಬರಿಗೆ ಕಾಣದ ಹಾಗೆ ಈ-ಮೇಲ್ ಕಳಿಸುವ ವಿಧಾನ) ಮಾಡಿದ್ರು ಎಷ್ಟು ಜನರಿಗೆ ಕಳಿಸಿದ್ದು ಗೊತ್ತಾಗಲ್ಲವಾದರೂ ನನಗೆ ವೈಯಕ್ತಿಕವಾಗಿ ಕಳಿಸಿದ್ದು ಅಲ್ಲ ಅಂತನಾದ್ರೂ ಗೊತ್ತಾಗಿಬಿಡುತ್ತದೆ, ಹೀಗೆ ಹತ್ತು ಜನರಲ್ಲಿ ಒಬ್ಬರೆಂದಾದಾಗ ಅದು ಶುಭಾಷಯವೆಂದು, ನನಗೆ ಬಂದದ್ದು, ನನ್ನ ಗೆಳೆಯ ಕಳಿಸಿದ್ದು ಅಂತನಾದ್ರೂ ಅನಿಸೋದು ಹೇಗೆ. ಇಂಥ ಶುಭಾಷಯ ನಿಜಕ್ಕೂ ಬೇಕಾ, ನನಗೆ ಗೊತ್ತಿಲ್ಲ. ಆದರೆ ಹಾಗೆ ಮಾಡುವುದು ನನಗೆ ಇಷ್ಟವಿಲ್ಲ, ಅಷ್ಟೇ.

ಮುಂಜಾನೆ ಏಳಕ್ಕೆ ವಾಣಿ(ಮೊಬೈಲು) ಕಿರುಚುತ್ತಿದ್ಲು, ರಾತ್ರಿ ಇಪ್ಪತ್ತು ಮೆಸೇಜ ಕಳಿಸಿದ್ದಳಲ್ಲ, ಅದಕ್ಕೆ ಗೆಳೆಯರು ಅವರಿಗೂ ಗೆಳೆತನ ನೆನಪಾಗಿ ಎದ್ದು ತಮಗೆ ಯಾರೊ ಕಳಿಸಿದ ಮೆಸೇಜು ಫಾರವರ್ಡ ಮಾಡುತ್ತಿದ್ದರು, ಕೈಗೆತ್ತಿಕೊಂಡು ಸುಮ್ನಿರು ಅಂತ ಸುಮ್ಮನಾಗಿಸಿ, "ನಿನ್ನ ಗೆಳೆಯರು ಗೆಳತಿಯರು ಶುಭಾಷಯ ತಿಳಿಸ್ತಾ ಇದಾರೆ ನೋಡು, ಮೆಸೆಜ ಬಾಕ್ಸ್ ತುಂಬಿದೆ" ಅಂದೆ. "ನೀವೇ ನೋಡಿ ಡಿಲೀಟ್ ಮಾಡ್ರೀ, ಎನಾದ್ರೂ ವಿಶೇಷ ಇದ್ರೆ ಓದಿ ಹೇಳಿ" ಅಂದ್ಲು. ಒಂದೊಂದಾಗಿ ಡಿಲೀಟ ಮಾಡತೊಡಗಿದೆ, ಇವಳು ಕಳಿಸಿದ ಮೆಸೇಜುಗಳೂ ಹೀಗೆ ಎಲ್ಲೋ ಡಿಲೀಟ ಆಗಿ ಹೋಗುತ್ತಿರಬೇಕು ಅಂತಂದುಕೊಳ್ಳುತ್ತ... ಮತ್ತೆ ಸಿಗೋಣ ಹೀಗೆ ಏನೊ ಮೆಸೇಜು ಕಳಿಸುತ್ತ...

ಇಷ್ಟೊತ್ತು ಓದಿದ್ದು ಇಷ್ಟಾ ಆದ್ರೆ ಮೆಚ್ಚಿ, ಸಿಟ್ಟು ಬಂದಿದ್ರೆ ಚುಚ್ಚಿ ಇಂಚೆ (ಇ-ಅಂಚೆ) ಹಾಕಿ... ನನ್ನ ವಿಳಾಸ pm@telprabhu.com . ಹೀಗೆ ನೀವು ಓದಿ ಖುಶಿಯಾಗಿದ್ರೆ ನಿಮ್ಮ ಗೆಳೆಯರಿಗೂ ಇದನ್ನ ಕಳಿಸಿ, ಸಂತೋಷ ಇರೋದೇ ಹಂಚೋಕೆ ತಾನೆ...